ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 197/2023
ಪಿಡಬ್ಲೂ : 3

| | | |
|---|---|---|
| ಹೆಸರು | : | ಶ್ರೀ ನಿತಿನ |
| ತಂದೆಯ ಹೆಸರು | : | ಎ ವಿ ಹರಿದಾಸ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಆಫೀಸರ್ ಕೆನರಾ ಬ್ಯಾಂಕ ಅಂಕೋಲಾ |
| ವಾಸ್ತವ್ಯ | : | ಅಂಕೋಲಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 06-03-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**ಮುಖ್ಯ ವಿಚಾರಣೆ : ಪಿರ್ಯಾದುದಾರರ ಪರವಾಗಿ : ಶ್ರೀಮತಿ ಎಸ್ ಎಸ್ ಕೆ ವಕೀಲರಿಂದ :**

ನಾನು ಮೇ 2025 ರಿಂದ ಕೆನರಾ ಬ್ಯಾಂಕ ಅಂಕೋಲಾದಲ್ಲಿ ಆಫೀಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ನಿಪಿ-2 ಕೆನರಾ ಬ್ಯಾಂಕ ಅಂಕೋಲಾ ಬ್ರಾಂಚ್ ನ ಚೆಕ್ ಆಗಿರುತ್ತದೆ . ಸದರಿ ಚೆಕ್ ನ್ನು 2020 ರ ಹಿಂದೆ ಇಸ್ಸು ಮಾಡಲಾಗಿದೆ . ಸದರಿ ಚೆಕ್ ಲೀಪ್ ನ್ನು ನಮ್ಮ ಕಸ್ಟಮರ್ ಗೆ ನೀಡಲಾಗಿದೆ . ಸದರಿ ಚೆಕ್ ಗಜಾನನ ಗಣಪತಿ ನಾಯ್ಕರವರ ಚೆಕ್ ಆಗಿರುತ್ತದೆ . ಚೆಕ್ ನ್ನು ದಿಃ 25-11-2019 ಹಿಂಬರಹವನ್ನು ದಿಃ 26-11-2019. ನಿಪಿ-3 ಕೆಡಿಸಿಸಿ ಬ್ಯಾಂಕನಿಂದ ನೀಡಲಾಗಿದೆ ನಮ್ಮ ಬ್ಯಾಂಕಿನಿಂದ ಅಲ್ಲ. ಸಾಮಾನ್ಯವಾಗಿ ನಮ್ಮ ಬ್ಯಾಂಕಿಗೆ ಬೇರೆ ಬ್ಯಾಂಕಿನ ಚೆಕ್ ನ್ನು ಹಾಜರು ಪಡಿಸಿದಾಗ ಇತ್ತೀಚೆಗಿನ ಸಿಸ್ಟಮ್ ಪ್ರಕಾರ ನಾವು ಚೆಕ್ ನು ಸ್ಕಾನ್ ಮಾಡುತ್ತೇವೆ ಅದು ಸೆಂಟ್ರಲೈಜ್ ಕ್ಲಿಯರಿಂಗ್ ಗ್ರೀಡ್ ಆಗುತ್ತದೆ . 2019 ರಲ್ಲಿ ಏನು ಪ್ರೊಸಿಜರ್ ಇತ್ತು ನನಗೆ ಗೊತ್ತಿಲ್ಲ. ನಾನು 2016 ರಿಂದ ಕೆನರಾ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

ನನಗೆ ಬ್ಯಾಂಕಿನ ಪ್ರೊಸಿಜರ್ ಗೊತ್ತಿದೆ . 2016 ರಿಂದ ಮೇಲೆ ಹೇಳಿದ ಪ್ರೊಸಿಜರ್ ಇರಲಿಲ್ಲ. 2019 ರಲ್ಲಿ ಬೇರೆ ಬ್ಯಾಂಕಿನ ಚೆಕ್ ನ್ನು ಹಾಜರು ಪಡಿಸಿದಾಗ ಯಾವ ಕ್ರಮವನ್ನು ಕೈಗೊಳ್ಳುತ್ತಿದ್ದರು ನಾನು ಚೆಕ್ ಮಾಡಿ ಹೇಳಬೇಕಾಗುತ್ತದೆ .

(ಈ ಹಂತದಲ್ಲಿ ಫಿರ್ಯಾದು ಪರ ವಕೀಲರು ವಿನಂತಿ ಮೇರೆಗೆ ಮುಖ್ಯ ವಿಚಾರಣೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.